DA – 001

# ಪ್ರಥಮ ವರ್ಷ ಬಿ.ಎ./ಬಿ.ಕಾಂ./ಬಿ.ಬಿ. ಎಂ. (DCC) ಪರೀಕ್ಷೆ, ಆಗಸ್ಟ್ 2016
## (DCC Only) (2013 – 14 & Onwards) (Fresh + Repeaters)
## ಕನ್ನಡ ಭಾಷೆ – I
## ಕನ್ನಡ ಭಾಷಾ ಅಭ್ಯಾಸ

ಸಮಯ : 3 ಗಂಟೆಗಳು ಗರಿಷ್ಠಾಂಕ : 100

1. ಅ) **ಒಂದರ** ಭಾವವನ್ನು ವಿವರಿಸಿ : **(1×5= 5)**

1) ಬೆಲೆಯಿಂದಕ್ಕುಮೆ ಕೃತಿ ಗಾ
ವಿಲ ಭುವನದ ಭಾಗ್ಯದಿಂದಮಕ್ಕುಂ ನೋವಿಂ
ಬೆಲೆಗೊಟ್ಟು ತಾರ ಮಧುವಂ
ಮಲಯಾನಿಲನಂ ಮನೋಜನಂ ಕೌಮುದಿಯಂ.

2) ಹೊನ್ನು ಮಾಯೆಯೆಂಬರು, ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ
ಮನದ ಮುಂದಣ ಆಶೆಯೇ ಮಾಯೆ ಕಾಣಾ ಗೊಹೇಶ್ವರಾ

ಆ) **ಎರಡನ್ನು** ಸಂದರ್ಭ ಸಹಿತ ವಿವರಿಸಿ : **(2×3= 6)**

1) ಮುಡಿವ ಭೋಗಿಗಳಿಲ್ಲದೆ ಬಾಡಿಪೋಗದೇ
2) ಹಾಲತೊರೆಗೆ ಬೆಲ್ಲದ ಕೆಸರು ಸಕ್ಕರೆಯ ಮಳಲು.
3) ಸೇವಿಸುವುದೇ ಕಷ್ಟವೆಂಬುದು, ಕೋವಿದರ ಮತ
4) ಹನಿಗೂಡಿ ಹಳ್ಳ ನಾರೊಡಗೂಡಿ ಹಗ್ಗ.

ಇ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **(2×2= 4)**

ವಚನ, ಜೇಡರ ದಾಸಿಮಯ್ಯ, ಕುಮಾರವ್ಯಾಸ, ಹಂಪೆಯ ವಿರೂಪಾಕ್ಷ

2. **ಎರಡು** ಪಶ್ನೆಗಳಿಗೆ ಉತ್ತರಿಸಿ : **(10×2=20)**

1) ಪ್ರಾಚೀನ ಕವಿಗಳು ಸರಸ್ವತಿಯನ್ನು ಹೇಗೆ ವರ್ಣಿಸಿದ್ದಾರೆ ? ವಿವರಿಸಿ.
2) ಕೀಚಕನಿಂದ ಪಾರಾಗಲು ದ್ರೌಪದಿ ಅನುಸರಿಸಿದ ಮಾರ್ಗವೇನು ? ವಿಶದಪಡಿಸಿ.
3) ಬೇಡನ ಕ್ರೌರ್ಯ ಮತ್ತು ಗಿಳಿಗಳ ಅಸಹಾಯಕತೆಯನ್ನು ನಾಗವರ್ಮ ಹೇಗೆ ವರ್ಣಿಸಿದ್ದಾನೆ ?
4) ಭರತನ ಕಿರುವೆರಳು ನೇರವಾದದ್ದು ಹೇಗೆ ? ವಿವರಿಸಿ.

3. ಅ) **ಒಂದರ** ಭಾವವನ್ನು ವಿವರಿಸಿ : **(1×5= 5)**

1) ಬೋಧಮಾಯ್ತೆನಗೀಗಳ್, ಮಗಿಪ್ರಾಜ್ಞ
ಬುದ್ಧಿಗಲಿನೆದಯ್ ಸಂಪ್ರದಾಯಬದ್ಧಂಗೆ,
ಶಾಸ್ತ್ರಸಂ ಮೂಢಂಗೆ, ಜಾತಿಗರ್ವಾಂಧಂಗೆ,–
ಆವ ಜಾತಿಯ ತರುವೊ ? ಇಂಧನಕೆ ಹೊರತುಂಟೆ ?
ಜಿಂಕೆಗೇಂ ಭೇದಯೆ ?ದಳ್ಳುರಿಗೆ ದಾಕ್ಷಿಣ್ಯವೆ ?
ಆರಾದರೇನ್ ? ಆರಾಧ್ಯರ್ ತಪೋಧನರ್ !
ನಮಸ್ಕಾರಮೆ ಪುಣ್ಯಂ; ತಿರಸ್ಕಾರಮೆ ಪಾಪಂ !

2) ಅಲ್ತಲ್ತು, ರಾಮಚಂದ್ರ,
ಶೂದ್ರನ್ ತಪಂಗೆಯ್ವೊಂದು ಅಧರ್ಮಕ್ಕೆ,
ವರ್ಣಾಶ್ರಮ ಧರ್ಮದುಲ್ಲಂಘನೆಯ ಪಾಪಕ್ಕೆ,
ನಿನ್ನ ಬಾಲ ಪ್ರಜೆಯೊರ್ವನ್ ಬಲಿಯಾದನ್–
ಮುಂದಾವ ಮಹತ್ಕಾರ್ಯಮಂ ಗೆಯ್ಯಲಿರ್ದನೊ ?

ಆ) **ಎರಡನ್ನು** ಸಂದರ್ಭ ಸಹಿತ ವಿವರಿಸಿ : **(2×3= 6)**

1) ಮೂಲೋಕದೊಳ್ ಮೀಸೆವೊತ್ತವನ್ ಕಾಣೆನ್
2) ಈಗಳಾ ಶೂದ್ರಂಗೆ ತಕ್ಕುದಕ್ಕುಂ.
3) ರಾಮರಾಜ್ಯದೊಳ್ ಅಧರ್ಮಮೆ ಮೃತ್ಯು
4) ಮಾತು ಮಾತಿನೊಳೆನ್ನ ಮರ್ಮಮಂ ಚುಚ್ಚುವನ್.

ಇ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : **(2×2= 4)**

ಉತ್ತರ ರಾಮಾಯಣ, ಕುವೆಂಪು, ಪೌರಾಣಿಕ ನಾಟಕ, ಬ್ರಾಹ್ಮಣನ ಮಗ

4. **ಎರಡು** ಪ್ರಶೆಗಳಿಗೆ ಉತ್ತರಿಸಿ : **(2×10= 20)**

1) 'ಶೂದ್ರ ತಪಸ್ವಿ' ನಾಟಕದ ಆಶಯವೇನು ?
2) ಉತ್ತರ ರಾಮಾಯಣ ಮತ್ತು ಶೂದ್ರತಪಸ್ವಿಯ ಕಥಾವಸ್ತುವನ್ನು ತೌಲನಿಕವಾಗಿ ವಿವರಿಸಿ.
3) ಬ್ರಾಹ್ಮಣ ಮತ್ತು ಶ್ರೀರಾಮನ ಸಂಭಾಷಣೆಯ ಸ್ವಾರಸ್ಯವನ್ನು ಸಂಗ್ರಹಿಸಿ ಬರೆಯಿರಿ.
4) ಶಂಬೂಕ, ವೃಕ್ಷಭೈರವ, ಮೃತ್ಯುದೇವತೆ – ಇವರಲ್ಲಿ ಇಬ್ಬರ ಪಾತ್ರಗಳನ್ನು ಚಿತ್ರಿಸಿ.

5. **ಒಂದು** ಪ್ರಶ್ನೆಗೆ ಉತ್ತರಿಸಿ : **(1×15=15)**

1) ಮೊಸರಿನ ಮಂಗಮ್ಮ ಕಥೆಯ ಸ್ವಾರಸ್ಯವನ್ನು ವಿವರಿಸಿ.

2) ಗುಂಡಾಚಾರ್ಯರ ವ್ಯಕ್ತಿತ್ವವನ್ನು ಪಂಜೆ ಮಂಗೇಶರಾಯರು ಹೇಗೆ ಚಿತ್ರಿಸಿದ್ದಾರೆ ?

3) 'ನಾನು ಕೊಂದ ಹುಡುಗಿ' ಕಥೆಯಲ್ಲಿನ ಚೆನ್ನಿಯ ಬಾಳು ದುರಂತವಾಗಲು ಕಾರಣವೇನು ? ವಿಶದಪಡಿಸಿ.

6. **ಒಂದು** ಪ್ರಶ್ನೆಗೆ ಉತ್ತರಿಸಿ : **(1×15=15)**

1) ದಲಿತ ಕವಿಯೊಬ್ಬನ ಆತ್ಮಕಥನ'ಊರು ಕೇರಿ' ಯಲ್ಲಿ ಹೇಗೆ ನಿರೂಪಿತವಾಗಿದೆ ? ಚರ್ಚಿಸಿ.

2) ಸಿದ್ಧಲಿಂಗಯ್ಯನವರ ಹುಡುಗಾಟದ ದಿನಗಳು ಹೇಗಿದ್ದವು ? ವಿಶ್ಲೇಷಿಸಿ.

3) ಊರಿನ ಪರಿಸರ, ಬಸವಲಿಂಗಪ್ಪ, ವಿದ್ಯಾರ್ಥಿನಿಲಯದ ಬದುಕು – ಇವುಗಳಲ್ಲಿ ಎರಡಕ್ಕೆ ಟಿಪ್ಪಣಿ ಬರೆಯಿರಿ.

---